- -                                                  ಓ ಎಸ್ ನಂ. 213/2023

ಡಿ ಡಬ್ಲ್ಯೂ :1

ದಿನಾಂಕ : 04-07-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

ನಾನು ಮತ್ತು ವಾದಿ ಸಹೋದರರು ಎಂದರೆ ಸರಿ . ದಾವಾ ಷೆಡ್ಯೂಲ್ 1 ನೇ ಸ್ವತ್ತು ವಾದಿಯ ಸ್ವತ್ತಿನ ಪೂರ್ವಕ್ಕೆ ಹೊಂದಿಕೊಂಡಂತೆ ಇದೆ ಎಂದರೆ ಸರಿ . ದಾವಾ ಷೆಡ್ಯೂಲ್ 2 ನೇ ಸ್ವತ್ತು ವಾದಿಯ ಸ್ವತ್ತಿನ ದಕ್ಷಿಣಕ್ಕೆ ಹೊಂದಿಕೊಂಡಂತೆ ಇದೆ ಎಂದರೆ ಸರಿ. ನನಗೆ ಯರೇಕಾವಲ್ ಗ್ರಾಮದಲ್ಲಿ 4 ಎಕರೆ ಸ್ವತ್ತು ಇದೆ ಎಂದರೆ ಸರಿ . ಈಗ ಅದರಲ್ಲಿ ಅಡಿಕೆ ಗಿಡಗಳನ್ನು ನೆಟ್ಟಿದ್ದೇವೆ ಎಂದರೆ ಸರಿ . ನಾನು ಒಂದು ಮನೆಯನ್ನು ಮಾರಾಟ ಮಾಡಿದ್ದೇವೆ . ಆ ನಂತರ ಅದನ್ನು ಬಿಡಿಸಿಕೊಂಡಿದ್ದೇನೆ ಎಂದರೆ ಸರಿ . 4 ಎಕರೆ ಸ್ವತ್ತನ್ನು ಅಭಿವೃದ್ಧಿಗೊಳಿಸುವ ಸಲುವಾಗಿ ಮತ್ತು ಈ ಮೇಲೆ ಹೇಳಿದ ಮನೆಯನ್ನು ಬಿಡಿಸಿಕೊಳ್ಳುವ ಸಲುವಾಗಿ ಹಣದ ಅವಶ್ಯಕತೆ ಇದ್ದದರಿಂದ ವಾದಿಗೆ ದಾವಾ ಸ್ವತ್ತುಗಳ ಸಂಬಂಧ ಕ್ರಯದ ಕರಾರು ಪತ್ರ ನೋಂದಾಯಿಸಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ . 14,40,000/- ರೂಗಳಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಲು ಒಪ್ಪಿಕೊಂಡಿದ್ದೆ ಮತ್ತು ಕರಾರಿನ ದಿನದಂದು 10 ಲಕ್ಷ ರೂಗಳನ್ನು ಮುಂಗಡವಾಗಿ ಪಡೆದಿದ್ದೇನೆ ಎಂದರೆ ಸರಿಯಲ್ಲ . ಉಳಿದ ಮೊತ್ತವನ್ನು ದಾವಾ ಸ್ವತ್ತಿನ ಸಂಬಂಧ ಸರ್ವೆ ದಾಖಲೆಗಳನ್ನು ಹೊಂದಿಸಿಕೊಂಡು ಕ್ರಯ ಪತ್ರ ನೋಂದಾಯಿಸಿಕೊಡುವ ಸಮಯ ಪಡೆದುಕೊಳ್ಳುತ್ತೇನೆ ಎಂದು ತಿಳಿಸಿದ್ದೆ ಎಂದರೆ ಸರಿಯಲ್ಲ . ದಾವಾ ಸ್ವತ್ತಿನ ಸರ್ವೆ ಮಾಡಿಸುವ ಸಲುವಾಗಿ ನೀವು ಯಾವುದೇ ಅರ್ಜಿ ಸಲ್ಲಿಸಿಲ್ಲ ಎಂದರೆ ಸಾಕ್ಷಿಯು ನಾನು ಅರ್ಜಿ ಸಲ್ಲಿಸಿದ್ದೆ , ಸರ್ವೆಯರ್ ರವರು ಅಳತೆಗೆ ಬಂದಾಗ ವಾದಿಯು ಸಹಿ ಮಾಡಿಲ್ಲ , ಆ ಕಾರಣ ಅಳತೆ ಮಾಡಿಲ್ಲ ಎಂದು ತಿಳಿಸಿದ್ದಾರೆ . ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಹೆಚ್ ಹೆಚ್ ದಯಾನಂದರವರು ನಾನು ಹೇಳಿದ ವಿವರಗಳ ಆಧಾರದಲ್ಲಿ ನಿಪಿ -1 ನ್ನು ತಯಾರಿಸಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ . ದಾವಾ ಸ್ವತ್ತು ನನಗೆ ವಿಭಾಗ ಮೂಲಕ ಬಂದಿದೆ ಎಂದು ನಾನು ಹೇಳಿ ಬರೆಸಿಲ್ಲ . ದಾವಾ ಸ್ವತ್ತಿಗೆ ಸಂಬಂಧಿಸಿ ನಾನು ಕಂದಾಯ ಪಾವತಿ ಮಾಡುತ್ತಿದ್ದೇನೆ

ಮತ್ತು ನಾನು ಸ್ವಾಧೀನದಲ್ಲಿದ್ದೇನೆ ಎಂದು ನಿಪಿ -1 ರಲ್ಲಿ ಬರೆಸಿದ್ದೇನೆ ಎಂದರೆ ಸಾಕ್ಷಿಯು ದಾವಾ ಸ್ವತ್ತಿನಲ್ಲಿ ನಾನು ಸ್ವಾಧೀನದಲ್ಲಿರುವುದು ನಿಜ ಆದರೆ ನಿಪಿ -1 ಕ್ಕೆ ನಾನು ವಿವರ ನೀಡಿಲ್ಲ , ವಾದಿಯು ನಿಪಿ -1 ನ್ನು ತಯಾರಿಸಿಕೊಂಡು ಬಂದು ಅದಕ್ಕೆ ನನ್ನ ಸಹಿ ಪಡೆದಿದ್ದಾರೆ , ಅದರಲ್ಲಿರುವ ಯಾವುದೇ ವಿವರ ನನಗೆ ತಿಳಿಸಿಲ್ಲ ಎಂದು ಉತ್ತರಿಸಿದ್ದಾರೆ . ನಿಪಿ -1 ಕ್ಕೆ ನಾನು ಮತ್ತು ನನ್ನ ಪತ್ನಿ ಹಾಗೂ ಮಕ್ಕಳು ಸಹಿ ಮಾಡಿದ್ದೇವೆ ಎಂದರೆ ಸರಿ , ಸಾಕ್ಷಿಯು ವಾದಿಯು ಪತ್ರ ತಯಾರಿಸಿಕೊಂಡು ಬಂದು ನಮಗೆ ಓದಲು ಅವಕಾಶ ನೀಡದೇ ಗಡಿಬಿಡಿಯಲ್ಲಿ ಸಹಿ ಮಾಡಿಸಿದ್ದಾರೆ ಎಂದು ತಿಳಿಸಿದ್ದಾರೆ . ನಿಪಿ -1 ರಲ್ಲಿ ವಾದಿಯ ಸಹಿಯೂ ಇರತ್ತದೆ ಎಂದರೆ ಅವರು ಸಹಿ ಹಾಕಿಕೊಂಡಿದ್ದಾರೆ ಎಂದು ತಿಳಿಸಿದ್ದಾರೆ . ನಿಪಿ -1 ಕ್ಕೆ ನಾವು ತಾಲ್ಲೂಕು ಕಚೇರಿಯ ಬಳಿ ಸಹಿ ಮಾಡಿದ್ದೇವೆ ಎಂದರೆ ಸರಿ . ಹೆಚ್ ಹೆಚ್ ದಯಾನಂದರವರು ನನ್ನ ಹೇಳಿಕೆಯ ಆಧಾರದಲ್ಲಿ ನಿಪಿ -1 ನ್ನು ತಯಾರಿಸಿದ್ದು ನಂತರ ಅದರಲ್ಲಿರುವ ವಿವರಗಳನ್ನು ಓದಿ ತಿಳಿಸಿ ನಮ್ಮ ಸಹಿ ಪಡೆದಿದ್ದಾರೆ ಎಂದರೆ ಸಾಕ್ಷಿಯು ನಾನು ಯಾವುದೇ ವಿವರಗಳನ್ನು ನೀಡಿಲ್ಲ , ದಾಖಲೆ ತಯಾರಿಸಿ ಸಹಿ ಮಾಡಿಸಿದ್ದಾರೆ , ಓದಲು ಅವಕಾಶ ನೀಡಿಲ್ಲ , ಕೋರೋನ ಇದ್ದುದರಿಂದ ನಾವು ಸಹಾ ಹೇಳಿದ ಕೂಡಲೇ ಸಹಿ ಮಾಡಿದ್ದೇವೆ ಎಂದು ತಿಳಿಸಿದ್ದಾರೆ . ನಿಪಿ -1 ನ್ನು ನೋಂದಾಯಿಸುವಾಗ ನನ್ನ ಮತ್ತು ನನ್ನ ಪತ್ನಿಯ ಭಾವಚಿತ್ರಗಳನ್ನು ತೆಗೆದಿದ್ದಾರೆ ಎಂದರೆ ಸರಿ . ಭಾವಚಿತ್ರಗಳ ಬಳಿ ನಮ್ಮ ಸಹಿ ಪಡೆದಿದ್ದಾರೆ ಎಂದರೆ ಸರಿ .ನಿಪಿ -1 ನ್ನು ನೋಂದಾಯಿಸಿದ ದಿನ ಮಂಜುನಾಥ ಮತ್ತು ರಂಗಸ್ವಾಮಿಯವರನ್ನು ನಾನೇ ಸಾಕ್ಷಿಯಾಗಿ ಕರೆತಂದಿದ್ದೆ ಎಂದರೆ ಸರಿಯಲ್ಲ . ಅವರಿಬ್ಬರು ನನಗೆ ಪರಿಚಿತರು ಎಂದರೆ ಸರಿಯಲ್ಲ . ನಿಪಿ -1 ರ ದಿನಾಂಕದಂದು ಸಾಕ್ಷಿಗಳ ಸಮಕ್ಷಮ ವಾದಿಯು ನನಗೆ 10 ಲಕ್ಷ ರೂಗಳನ್ನು ನೀಡಿದ್ದಾರೆ ಎಂದರೆ ಸರಿಯಲ್ಲ . ವಾದಿಯು ಹಲವು ಬಾರಿ ನನ್ನ ಬಳಿ ಕ್ರಯ ಪತ್ರ ನೋಂದಾಯಿಸಿಕೊಡಬೇಕೆಂದು ಕೋರಿದ್ದಾರೆ , ಆದರೂ ಸಹಾ ನಾನು ದಾಖಲೆಯನ್ನು ನೋಂದಾಯಿಸಿಕೊಟ್ಟಿಲ್ಲ ಆ ಕಾರಣ ದಿಃ 28-11-2022 ರಂದು ನೋಟಿಸ್ ನೀಡಿದ್ದಾರೆ ಎಂದರೆ ಸರಿಯಲ್ಲ . ನೋಟಿಸ್ ನನಗೆ ಜಾರಿಯಾಗಿದ್ದು , ಅದಕ್ಕೆ ನಾನು ಪ್ರತ್ಯುತ್ತರ ನೀಡಿಲ್ಲ . ನಿಪಿ -1 ರ ವಿವರಗಳನ್ನು ಓದಿ ತಿಳಿದುಕೊಂಡು ನಂತರ ನಾನು ಮತ್ತು ನನ್ನ ಪತ್ನಿ ಹಾಗೂ ಮಕ್ಕಳು ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ . ನಿಪಿ -1 ನ್ನು ಮೋಸದಿಂದ

ಬರೆಸಿಕೊಂಡಿದ್ದಾರೆ ಎಂದು ತಿಳಿಸಿ ವಾದಿಯ ವಿರುದ್ಧ ನಾನು ಯಾವುದೇ ದೂರು ದಾಖಲಿಸಿಲ್ಲ . ನಿಪಿ -1 ನ್ನು ನೋಂದಾಯಿಸಿಕೊಡುವ ಮೊದಲು ಸ್ವತ್ತುಗಳಲ್ಲಿ ನಮಗೆ ಯಾವುದೇ ಅದಾಯವಿರಲಿಲ್ಲ ಎಂದರೆ ಸರಿಯಲ್ಲ . , ಯರೇಕಾವಲು ಸ್ವತ್ತಿನಲ್ಲಿ ಆದಾಯವಿತ್ತು ಎಂದು ಸಾಕ್ಷಿ ಹೇಳಿದ್ದಾರೆ , ಸದರಿ ಆದಾಯ ನನ್ನ ಜೀವನಕ್ಕೆ ಸಾಕಾಗುತ್ತಿತ್ತು ಎಂದರೆ ಸರಿ .

ಪ್ರತಿರಕ್ಷಣಾ ಪತ್ರದಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ . ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ಗೊತ್ತಿಲ್ಲ .ನಿಪಿ -1 ರ ಕರಾರನ್ನು ವಾದಿಗೆ ನೋಂದಾಯಿಸಿಕೊಟ್ಟಿದ್ದರೂ ಅವರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆ ಇಲ್ಲ **.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

SD/-
(ಅನುಪಮ.ಡಿ. )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .